**2ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ**
**ಸಾಃ ಗೋಕಾಕ.**

**ಸಿ.ಸಿ ನಂಃ 2109/2013**
**ಸಿಡಬ್ಲ್ಯೂ ಃ 3 ಪಿಡಬ್ಲ್ಯೂ ಃ 4**

**ಸಾಕ್ಷಿದಾರರ ಹೆಸರು** ಃ- ಬಸಪ್ಪ ಉದ್ದಪ್ಪಾ ರಾಜಾಪೂರೆ

**ವಯಸ್ಸು** ಃ- 32 ವರ್ಷ

**ಉದ್ಯೋಗ** ಃ- ಶೇತ್ಕಿ

**ಸಾಕೀನ** ಃ- ಪಾಮಲದಿನ್ನಿ

**ದಿಃ 07-12-2018 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸ.ಸ.ಅ. ರವರಿಂದ ;**

ಚಾಸಾ-1 ರವರ ಪರಿಚಯ ಇದೆ. ಈಗ ತೋರಿಸುತ್ತಿರುವ ದಾಖಲೆಯ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆಯು ಗುನ್ನಾ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ನಿಪಿ-2 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ-2 ಎ ಅಂತಾ ಗುರುತಿಸಲಾಯಿತು. ಸುಮಾರು 6 ವರ್ಷಗಳ ಹಿಂದೆ ನಂದಿ ಅವರ ಹೊಲದಲ್ಲಿ ಆಡಿನ ವಿಷಯವಾಗಿ ಹೊಡೆದಾಟ ಆಗಿತ್ತು. ಪೊಲೀಸರು ಸ್ಥಳಕ್ಕೆ ಬಂದಿದ್ದರು. ರಿ ಸ ನಂ. 162 ರಲ್ಲಿ ಜಗಳ ಆಗಿತ್ತು. ಲಕ್ಕಪ್ಪ ನಂದಿ ಅವರ ಮನೆ ಸಮೀಪ ಜಗಳ ಆಗಿತ್ತು. ನನ್ನ ಸಹಿ ಪಡೆದಾಗ ಚಾಸಾ-1 ರವರು ಇದ್ದರು. ಪಂಚನಾಮೆಯನ್ನು 09.00 ರಿಂದ 10.00 ರ ವರೆಗೆ ಮಾಡಿದರು. ಸ್ಥಳದಲ್ಲಿ ಸಹಿ ಮಾಡಿದ್ದೇನೆ.

**ಪಾಟೀ ಸವಾಲು ಃ ಎಸ್ ಎಂ ಬಿ ಆರೋಪಿ ಪರ ವಕೀಲರವರಿಂದ ;**

ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಅಂತಾ ನನಗೆ ಗೊತ್ತಿಲ್ಲ ಎಂದರೆ ಸರಿ. ದಿಃ 21-02-2013 ರಂದು ನನ್ನನ್ನು ಕರೆಯಿಸಿದ್ದರು. ಚಾಸಾ-1 ನನಗೆ ಕರೆಯಿಸಿದ್ದರು. ಚಾಸಾ-1 ನನಗೆ ಸಂಬಂಧಿಕರು ಎಂದರೆ ಸರಿ. ಚಾಸಾ-1 ಹಾಗೂ ಆರೋಪಿತರ ನಡುವೆ ಸಿವಿಲ್ ದಾವೆ ಇದೆ ಎಂದರೆ ಸರಿ. ಸದರಿ ದಾವೆಗೆ ಅನುಕೂಲವಾಗುವ ಸಲುವಾಗಿ ಈ ಪ್ರಕರಣದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ 1 ಸಹಿ ಪಡೆದಿದ್ದಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡದೇ ಇದ್ದರೂ ಸಹಿತ ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.
Sd/-
2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.